**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ ಸೇಡಂ**

**CC No. 417/2024**

**(ಇಂದು ದಿಃ 18-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

| ಹೆಸರು ಶ್ರೀ/ಶ್ರೀಮತಿ | ಮೋಗಲಪ್ಪ | CW-2 | PW-3 |
|---|---|---|---|
| ತಂದೆ/ಗಂಡನ ಹೆಸರು | ಯಲ್ಲಪ್ಪ | | |
| ವಯಸ್ಸು | 49 ವರ್ಷ | | |
| ಉದ್ಯೋಗ | ಕೂಲಿ | | |
| ವಾಸ ಸ್ಥಳ | ಮುದೋಳ್, ತಾಃ ಸೆಡೇಂ | | |

**ಮುಖ್ಯ ವಿಚಾರಣೆಃ- ಸಹಾಯಕ ಸರ್ಕಾರಿ ಅಭೀಯೋಜಕರಿಂದಃ-**

ಸಾಕ್ಷಿಗೆ ನಿಪಿ-1 ನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿ ಯ ಸಹಿಯನ್ನು ನಿಪಿ-1 (ಎ) ಎಂದು ಗುರುತಿಸಲಾಯಿತು. ನನಗೆ ನಿಪಿ- 1 ರ ಸಂಗತಿಗಳು ಗೊತ್ತಿಲ್ಲ, ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಮತ್ತು ಏನ್ನನ್ನು ವಶಪಡಿಸಿಕೊಂಡಿಲ್ಲ.

**ಮುಂದುವರೆದ ಮುಖ್ಯ ವಿಚಾರಣೆ ಇಲ್ಲ.**

**(ಈ ಹಂತದಲ್ಲಿ ಸ.ಸ.ಅ. ರವರ ವಿನಂತಿ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.)**

**ಪಾಟೀ ಸವಾಲುಃ- ಸಹಾಯಕ ಸರ್ಕಾರಿ ಅಭೀಯೋಜಕರಿಂದಃ-**

ದಿನಾಂಕ 09.04.2017 ರಂದು ನಾನು , ಚಾಸಾ-1, ಚಾಸಾ-4, ಚಾಸಾ-5 ಮತ್ತು ಚಾಸಾ-7 ರವರು ಕಡಚರರ್ಲಾ ಬಸ್ ಸ್ಟಾಂಡ ಹಿಂಬದಿ ಮಾಹಿತಿ ಬಂದ ಮೇರೆಗ ಖಾಸಗಿ ವಾಹನದಲ್ಲಿ ಅಲ್ಲಿಗೆ ಹೋದೇವು ಎಂದರೆ ಸರಿಯಲ್ಲ. ಅಲ್ಲಿ ಹೋಗಿ ನೋಡಲಾಗಿ ನಂತರ ದಾಳಿ ಮಾಡಿದಾಗ ಕೇಲವರು ಹೋಡಿ ಹೋದರು ಇಬ್ಬರು ಸಿಕ್ಕರು, ಅವರ ಹೆಸರು ಕೇಳಲಾಗಿ ಗೋಪಾಲ್ ತಂದೆ ಶಾಮಪ್ಪ ಮುತ್ತ ಗೋವಿಂದ ತಂದೆ ಕಾಶಪ್ಪ ಎಂದು ಹೇಳಿದರು ಎಂದರೆ ಸರಿಯಲ್ಲ. ಗೋಪಾಲ್ ನ ಬಳಿ 120 ರೂ. ತಲಾ 1 ಲೀ ಅಳತೆಯ 20 ಶೇಂದಿ ಪ್ಯಾಕೇಟ್ಗಳು ಸಿಕ್ಕವು ಎಂದರೆ ಸರಿಯಲ್ಲ. ಗೋವಿಂದ ನ ಬಳಿ 80/- ರೂ. ಮತ್ತು ತಲಾ 1 ಲೀ ಅಳತೆಯ 20 ಶೇಂದಿ ಪ್ಯಾಕೇಟ ಗಳುಸಿಕ್ಕವು

ಎಂದರೆ ಸರಿಯಲ್ಲ, ಪೊಲೀಸರು ಹೋಗುವಾಗ ನನ್ನನ್ನು ಮತ್ತು ಚಾಸಾ- 3 ರವರನ್ನು ಪಂಚರಾಗಿ ಕರೆದುಕೊಂಡು ಹೋಗಿದ್ದರು ಎಂದರೆ ಸರಿಯಲ್ಲ. ನನ್ನ ಮತ್ತು ಚಸಾ-3 ರ ಸಮಕ್ಷಮ ಚಾಸಾ-1 ರವರು ಶೇಂದಿ ಪ್ಯಾಕೇಟ್ ಗಳನ್ನು ಪಂಚನಾಮೆ ಮೂಲಕ ಜಪ್ತಿ ಮಾಡಿದರು ಎಂದರೆ ಸರಿಯಲ್ಲ, ಆ ದಿನ ಠಾಣೆಯನ ್ನ 11.45 ಕ್ಕೆ ಬಿಟ್ಟು, 12.30 ಕ್ಕೆ ಸ್ಥಳಕ್ಕೆ ಹೋಗಿದ್ದೇವು ಎಂದರೆ ಸರಿಯಲ್ಲ, ಚಸಾ-1 ನಿಮ್ಮ ಜೊತೆ ಬೇರೆ ಯಾರು ಶೇಂದಿ ಮಾರಾಟ ಮಾಡುತ್ತಾರೆ ಎಂದು ಆರೋಪಿಗಳನ್ನು ಕೇಳಿದಾಗ ಆರೋಪಿಗಳು ಬಾಲರಾಜು ಮತ್ತು ನಾರಾಯಣರವರ ಹೆಸರು ಹೇಳಿದರು ಎಂದರೆ ಸರಿಯಲ್ಲ, ಶೇಂದಿಯನ್ನು ತೆಲಂಗಾಣದ ರಾವಣಪಲ್ಲಿ, ಮೈಲವಾರ್ ಹಳ್ಳಿಗಳಿಂದ 5 ರೂಪಾಯಿಗೆ ಒಂದು ಪ್ಯಾಕೇಟ್ ತಂದು ಇಲ್ಲಿ 10 ರೂ. ಪ್ಯಾಕೇಟ್ ಮಾರಾಟ ಮಾಡುತ್ತೇವೆ ಎಂದು ಹೇಳಿದರು ಎಂದರೆ ಸರಿಯಲ್ಲ, 2 ಪ್ಯಾಕೇಟಗಳನ್ನು FSL ಪರೀಕ್ಷೆ ಗೆ ಕಳುಹಿಸುವ ಸಲುವಾಗಿ ಕಾಲಿ ನೀರಿನ ಬಾಟಲಿಗಳಿಗೆ ಹಾಕಿಕೊಂಡು ಬಾಟಲಿಗಳನ್ನು ಶೀಲ್ ಮಾಡಿದರು ಎಂದರೆ ಸರಿಯಲ್ಲ, ಪಂಚನಾಮೆಯನ್ನು 12.30 ರಿಂದ 01.30 ರವರೆಗೆ ಮಾಡಿದ್ದಾರೆ ಎಂದರೆ ಸರಿಯಲ್ಲ, ನಾನು ಆರೋಪಿಗಳಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನ ಎಂದರೆ ಸರಿಯಲ್ಲ,

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳ್ಳು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ, ಸೇಡಂ.**